**<u>ಮಾನ್ಯ ಸಿವಿಲ್ ನ್ಯಾಯಾಧೀಶರು ವ ಜೆ ಎಂ ಎಫ್‌ಸಿ ಮುದ್ದೇಬಿಹಾಳ, ಇವರ ನ್ಯಾಯಾಲಯ</u>**

ಸಿ ಸಿ ನಂಃ 702/2017
ಸಿಡಬ್ಲ್ಯೂ-10
ಪಿ.ಡಬ್ಲ್ಯೂ-8

ಸಾಕ್ಷಿದಾರನ ಹೆಸರು ಃ ರಮೇಶ ಹೊನ್ನಳ್ಳಿ

ತಾಯಿ ಹೆಸರು ಃ ಲಕ್ಷ್ಮೀಬಾಯಿ

ವಯಸ್ಸು ಃ 55 ವರ್ಷ,

ಉದ್ಯೋಗ : ಒಕ್ಕಲುತನ

ವಾಸಸ್ಥಳ ಃ ಪತ್ತೇಪೂರ

(ದಿಃ04/09/2023 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು)

**<u>ಮುಖ್ಯ ವಿಚಾರಣೆ ಸ ಸ ಅ ಅವರಿಂದ</u>**

ಚಾಸಾ 1 ರವರ ಪರಿಚಯವಿದೆ. ಮೃತ ಭೀಮಪ್ಪ ಇವರು ನನಗೆ ಚಿಕ್ಕಪ್ಪನಾಗಬೇಕು. ನನ್ನ ಚಿಕ್ಕಪ್ಪ ಸೈದಾಪೂರ ಮುತ್ಯಾನ ಜಾತ್ರೆಗೆ ಹೋಗಿದ್ದರು. ದಿಃ 16.7.2017 ರಂದು ನನ್ನ ಚಿಕ್ಕಪ್ಪ ರಸ್ತೆ ಅಪಘಾತವಾಗಿ ಅವರು ಸ್ಥಳದಲ್ಲಿಯೇ ತೀರಿಹೋಗಿರುವ ವಿಷಯ ನನಗೆ ಚಾಸಾ 1 ರವರಿಂದ ಗೊತ್ತಾಗಿರುತ್ತದೆ. ನಾನು ಆ ಸಮಯದಲ್ಲಿ ಪತ್ತೇಪೂರ ಗ್ರಾಮದಲ್ಲಿ ಇದ್ದೆ. ನಂತರ ನಾನು ನನ್ನ ಚಿಕ್ಕಪ್ಪನನ್ನು ಹೋಗಿ ನೋಡಲಾಗಿ ಆತನ ಕೈ ಮತ್ತು ಕಾಲುಗಳು ಮುರಿದಿದ್ದವು. ಘಟನೆ ಹೇಗೆ ಸಂಭವಿಸಿತು ಎಂದು ನಾನು ಚಾಸಾ 6 ರವರನ್ನು ವಿಚಾರಿಸಲಾಗಿ ಅವರು ಒಬ್ಬ ವ್ಯಕ್ತಿ ತನ್ನ ಜೀಪ ಸಂಖ್ಯೆ ಕೆಎ 28-0615 ಅನ್ನು ಹಿಂಬದಿ ತೆಗೆದುಕೊಳ್ಳುವಾಗ ನನ್ನ ಚಿಕ್ಕಪ್ಪನಿಗೆ ಹಾಯಿಸಿ ಅಪಘಾತಪಡಿಸಿರುವ ವಿಷಯ ನನಗೆ ತಿಳಿಸಿರುತ್ತಾರೆ. ಅಪಘಾತಪಡಿಸಿದ ವ್ಯಕ್ತಿಯ ಹೆಸರು ರಂಜಾನಸಾಬ ಅಬ್ಬಾಶಾ ಮಕಾನದಾರ ಎಂದು ಆಮೇಲೆ ನನಗೆ ಗೊತ್ತಾಗಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿತ ಸದರಿ ದಿನ ಅಪಘಾತಪಡಿಸಿರುತ್ತಾನೆ. ಸದರಿ ಅಪಘಾತ ಆರೋಪಿತನ ತಪ್ಪಿನಿಂದ ಸಂಭವಿಸಿರುತ್ತದೆ. ಘಟನೆ ಕುರಿತು ಪೋಲಿಸರಿಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ.

**ಪಾಟಿ ಸವಾಲುಃ  ಆರೋಪಿ ಪರವಾಗಿ ಶ್ರೀ ಆರ್ ವಾಯ್ ಎನ್ ವಕೀಲರಿಂದ**

ಮೃತ ಭೀಮಪ್ಪ ನನ್ನ ಚಿಕ್ಕಪ್ಪನಾಗಬೇಕು.  ಭೀಮಪ್ಪನವರ ಕುಟುಂಬಕ್ಕೆ ಅನುಕೂಲ ಆಗಲೀ ಎಂದು ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಮತ್ತು ಘಟನೆಯ ಕುರಿತು ನನಗೆ ವಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ.  ಆರೋಪಿ ನಮ್ಮ ಗ್ರಾಮದವನು ಎಂದರೆ ಸರಿ.  ನನ್ನ ಮತ್ತು ಆರೋಪಿತನ ಮಧ್ಯೆ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ.  ನನ್ನ ಮತ್ತು ಆರೋಪಿತನ ಮಧ್ಯೆ ವೈಮನಸ್ಸು ಇದ್ದ ಕಾರಣ ಆರೋಪಿತನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಪೋಲಿಸರು ನನ್ನ ಹೇಳಿಕೆಯನ್ನು ಠಾಣೆಯಲ್ಲಿ ತೆಗೆದುಕೊಂಡಿರುತ್ತಾರೆ.  ನಾನು ಪೋಲಿಸರಿಗೆ ಯಾವುದೇ ರೀತಿ ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.  ಘಟನೆ ನಡೆದ ಮರುದಿನ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.  ಘಟನೆ ನಡೆದ ಮರುದಿನ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾರ ಪೋಲಿಸರ ಸಮಕ್ಷಮ ಹೇಳಿಕೆ ಕೊಟ್ಟಿರುತ್ತೇನೆ ಎಂದು ಹೇಳಲು ಬರುವುದಿಲ್ಲ.  ಘಟನೆ ಕುರಿತು ಚಾಸಾ 1 ರವರು ನನಗೆ ತಿಳಿಸಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದು ನ್ಯಾಯಾಲಯಕ್ಕೆ ಚಾಸಾ 1, 11 ಮತ್ತು ನಾನು ಬಂದಿರುತ್ತೇವೆ ಎಂದರೆ ಸರಿ.  ಚಾಸಾ 1 ರವರ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಆರೋಪಿತನ ತಪ್ಪಿನಿಂದ ರಸ್ತೆ ಅಪಘಾತ ಸಂಬವಿಸಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಭಾಗಿಯಾದ ವಾಹನದ ಸಂಖ್ಯೆ ಕೆಎ 28 -0615 ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಓ ಹೇ ಕೇ ಸರಿ ಅದೆ.

ನ್ಯಾ ದಂ ಪ್ರ ವರ್ಗ, ಮುದ್ದೇಬಿಹಾಳ.